ದಿನಾಂಕಃ 24-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ವಿ ಬಿ ಟಿ ವಕೀಲರಿಂದ

ಮೂಲ ಪುರಷನಾದ ಅಡಿವೆಪ್ಪ ಹಳ್ಯಾಕಾಯಿ ರವರ ಹೆಂಡತಿಯ ಹೆಸರು ಯಮನಮ್ಮ ಇರಬಹುದು. ಸದರಿ ಯಮನಮ್ಮನಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ ಮೂರು ಜನ ಗಂಡು ಮಕ್ಕಳು ಇದ್ದರು. ಅವರ ಹೆಸರು ನನಗೆ ನೆನಪಿಲ್ಲ. ಮೂಲಪುರುಷ ಅಡಿವೆಪ್ಪನಿಗೆ ಸಿದ್ದಪ್ಪ, ಹನಮಂತಪ್ಪ, ಮಲ್ಲಪ್ಪ ಮತ್ತು ನೀಲಪ್ಪ ಎಂಬ ನಾಲ್ಕು ಜನ ಗಂಡು ಮಕ್ಕಳು ಇದ್ದರು ಎಂದರೆ ಸರಿ. ಅಡಿವೆಪ್ಪನ ಇಬ್ಬರು ಹೆಣ್ಣು ಮಕ್ಕಳು ಹೆಸರು ದೇವಕ್ಕ ಮತ್ತು ನೀಲವ್ವ. ಅಡಿವೆಪ್ಪನಿಗೆ ಇನ್ನೂ ಇಬ್ಬರು ಹೆಣ್ಣು ಮಕ್ಕಳ ಹೆಸರು ಮಲ್ಲವ್ವ ಮತ್ತು ಸಂಗವ್ವ ಎಂದರೆ ನನಗೆ ಗೊತ್ತಿಲ್ಲ. ದೇವಕ್ಕಳಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದರು. ನೀಲವ್ವಳ್ಳಿಗೆ ಎಷ್ಟು ಮಕ್ಕಳು ಎಂಬ ಮಾಹಿತಿ ನನಗೆ ಇಲ್ಲ.

ಮೂಲ ಪುರುಷ ಅಡಿವೆಪ್ಪನ ಮಗನಾದ ಅಡಿವೆಪ್ಪನಿಗೆ ಒಬ್ಬ ಗಂಡು ಮಗ ಆದರೆ, ಹೆಣ್ಣು ಮಕ್ಕಳು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಮೂಲ ಪುರಷನಾದ ಅಡಿವೆಪ್ಪನ ಮಗನಾದ ಹನಮಂತಪ್ಪ ಮಗನಾದ ಮಲ್ಲಪ್ಪನಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಇದ್ದರು. ಹನಮಂತಪ್ಪನ ಮಗಳಾದ ದೇವಕ್ಕನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರಬಹುದು. ದೇವಕ್ಕನ ನಾಲ್ಕು ಜನ ಮಕ್ಕಳ ಪೈಕಿ ಶೇಖಪ್ಪ ಮೃತ ಪಟ್ಟಿದ್ದಾನೆ. ಶೇಖಪ್ಪನಿಗೆ ಎಷ್ಟು

ಮಕ್ಕಳು ಎಂಬ ಮಾಹಿತಿ ನನಗೆ ಇಲ್ಲ. ಸಿದ್ದಪ್ಪನಿಗೆ ಒಬ್ಬಳು ಹೆಣ್ಣು ಮಗಳು ಹಾಗೂ ಮೂರು ಜನ ಗಂಡು ಮಕ್ಕಳು ಇದ್ದರು. ಮೂಲ ಪುರಷ ಅಡಿವೆಪ್ಪನ ಮಗನಾದ ಸಿದ್ದಪ್ಪನಿಗೆ ಯಲ್ಲಪ್ಪ, ಫಕ್ಕೀರಪ್ಪ, ನಾಗವ್ವ ಮತ್ತು ಮಹಾದೇವಪ್ಪ ಎಂಬ ಮಕ್ಕಳು ಎಂದರೆ ಸರಿ. ಇವರ ಪೈಕಿ ಮಹಾದೇವಪ್ಪ ಮೃತ ಪಟ್ಟಿದ್ದಾನೆ. ಮಹಾದೇವಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ಅವರ ಹೆಸರು ಹಿರಿಯಕ್ಕ, ಬಸಪ್ಪ ಹಾಗೂ ಹನಮಕ್ಕ ಎಂದರೆ ಸರಿ. ಸಿದ್ದಪ್ಪನ ಮಗನಾದ ಯಲ್ಲಪ್ಪನಿಗೆ ಗುಡ್ಡಪ್ಪ ಎಂಬ ಮಗನಿದ್ದಾನೆ ಎಂದರೆ ಸರಿ. ಸಿದ್ದಪ್ಪನ ಮಗನಾದ ಫಕ್ಕೀರಪ್ಪನಿಗೆ ಒಂದನೇ ಹೆಂಡತಿ ಹನಮವ್ವ ಹಾಗೂ ಎರಡನೇ ಹಂಡತಿ ಪುಟ್ಟವ್ವ ಎಂದರೆ ಸರಿ. ಒಂದನೇ ಹೆಂಡತಿ ಹನಮವ್ವ ಮೃತ ಪಟ್ಟ ನಂತರ ಫಕ್ಕೀರಪ್ಪ ಪುಟ್ಟವ್ವನನ್ನು ಮದುವೆ ಮಾಡಿಕೊಂಡಿದ್ದಾನೆ ಎಂದರೆ ಸರಿ. ಹನಮವ್ವಳ್ಳಿಗೆ ನಿಂಗಪ್ಪ ಹಾಗೂ ಪುಟ್ಟಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಎರಡನೇ ಹೆಂಡತಿಯಾದ ಪುಟ್ಟವ್ವಳಿಗೆ ಹನಮಕ್ಕ ಮತ್ತು ಸಿದ್ದಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸಿದ್ದಪ್ಪನ ಮಗಳಾದ ನಾಗವ್ವಳ್ಳಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು. ಅವರ ಹೆಸರು ಗುಡಪ್ಪ, ಮುತ್ತಪ್ಪ, ಅಕ್ಕಮ್ಮ ಹಾಗೂ ಶಿವಪುತ್ರಪ್ಪ ಎಂದರೆ ಸರಿ.

ಮೂಲ ಪುರಷನಾದ ಅಡಿವೆಪ್ಪನಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಮೂಲ ಪುರಷನಾದ ಅಡಿವೆಪ್ಪ ಮಕ್ಕಳ ನಡುವೆ ಯಾವಾಗ ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಡಿವೆಪ್ಪನ ನಾಲ್ಕು ಜನ ಮಕ್ಕಳಿಗೆ ವಿಭಾಗದಲ್ಲಿ

ಎಷ್ಟೆಷ್ಟು ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಮೂಲ ಪುರಷನಾದ ಅಡಿವೆಪ್ಪನ ಕೆಲವು ಆಸ್ತಿಗಳಲ್ಲಿ ವಿಭಾಗ ಆಗಿದೆ ಹಾಗೂ ಕೆಲವು ಆಸ್ತಿಗಳು ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇವೆ. ಯಾವ ಆಸ್ತಿಗಳಲ್ಲಿ ವಿಭಾಗ ಆಗಿದೆ ಎಂಬ ಮಾಹಿತಿ ನನಗೆ ಇಲ್ಲ.

ಸಿದ್ದಪ್ಪನ ಮರಣದ ನಂತರ ಆತನ ಮಕ್ಕಳ ನಡುವೆ ಯಾವಾಗ ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಫಕ್ಕೀರಪ್ಪ ಮಗಳಾದ ನಾಗವ್ವಳಿಗೆ ಏನು ಹಿಸ್ಸೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪನ ಆಸ್ತಿಯಲ್ಲಿ ಯಲ್ಲಪ್ಪನ ಹಿಸ್ಸಗೆ 10 ಎಕರೆ ಜಮೀನು ಬಂದಿರಬಹುದು. ಯಲ್ಲಪ್ಪನ ಹಿಸ್ಸೆಗೆ ಸರ್ವೆ ನಂ. 63/1 ರಲ್ಲಿ ಸುಮಾರು 03 ಎಕರೆ ಜಮೀನು, ಸರ್ವೆ ನಂ. 152 ರಲ್ಲಿ 03 ಎಕರೆ 11 ಗುಂಟೆ ಜಮೀನು ಹಾಗೂ ಇನ್ನೊಂದು ಮನೆ ಜಮೀನಿನಲ್ಲಿ ಹಿಸ್ಸೆ ಕೊಡಲಾಗಿದೆ. ಮಹಾದೇವಪ್ಪನ ಹಿಸ್ಸೆಗೆ 10 ಎಕರೆ ಜಮೀನು ಕೊಡಲಾಗಿದೆ. ಫಕ್ಕೀರಪ್ಪನ ಹಿಸ್ಸೆಗೆ 10 ಕಾಲು ಎಕರೆ ಜಮೀನು ಕೊಟ್ಟಿರಬಹುದು. ನಿಂಗಪ್ಪ, ಪುಟ್ಟಪ್ಪ ಮತ್ತು ಸಿದ್ದಪ್ಪನಿಗೆ ಎಷ್ಟು ಹಿಸ್ಸೆ ಕೊಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು 2 ಎಕರೆ 20 ಗುಂಟೆ ಮಸಾರಿ ಜಮೀನು ಮತ್ತು ಮನೆ ಹೊಲದಲ್ಲಿ ಸ್ವಲ್ಪ ಜಮೀನು ಕೊಟ್ಟಿದ್ದು ಅದರ ಕ್ಷೇತ್ರ ಉತಾರದಲ್ಲಿ ಕಾಣಿಸದಿರುವ ಕಾರಣ ಹೇಳಲು ಗೊತ್ತಾಗುವುದಿಲ್ಲ. ನಿಂಗಪ್ಪನಿಗೆ 03 ಎಕರೆ 11 ಗುಂಟೆ ಯರಿ ಜಮೀನು ಕೊಟ್ಟಿದ್ದಾರೆ. ಪುಟ್ಟಪ್ಪನಿಗೆ 02 ಎಕರೆ 20 ಗುಂಟೆ ಮಸಾರಿ ಜಮೀನು ಮತ್ತು ಮನೆ ಹೊಲದಲ್ಲಿ ಸ್ವಲ್ಪ ಜಮೀನು ಕೊಟ್ಟಿದ್ದಾರೆ.

ಪುಟ್ಟಪ್ಪ, ನಿಂಗಪ್ಪ ಮತ್ತು ಸಿದ್ದಪ್ಪನ ಹೆಸರಿಗೆ ಖಾತೆ ನಾನು ಚಿಕ್ಕವನಿದ್ದಾಗ ಆಗಿರುತ್ತವೆ. 1992 ರಲ್ಲಿ ಡ ಸಂಖ್ಯೆ 4025 ರ ಪ್ರಕಾರ ಖಾತೆ ಆಗಿವೆ ಎಂದರೆ ಸರಿ. ಇಚ್ಚಂಗಿ ಗ್ರಾಮದ ರಿ. ಸ. ಸಂಖ್ಯೆ 64/1, ಕ್ಷೇತ್ರ 03 ಎಕರೆ 12 ಗುಂಟೆಯ ಖಾತೆ ನಿಂಗಪ್ಪನ ಹೆಸರಿಗೆ ಆಗಿದೆ ಎಂದರೆ ಸರಿ. ಇಚ್ಚಂಗಿ ಗ್ರಾಮದ ರಿ. ಸ. ಸಂಖ್ಯೆ 152/2 ರ ಪೂರ್ವದ ಕ್ಷೇತ್ರ 02 ಎಕರೆ 20 ಗುಂಟೆ ಜಮೀನಿನ ಖಾತೆ ಪುಟ್ಟಪ್ಪನ ಹೆಸರಿನಲ್ಲಿ ಆಗಿದೆ ಎಂದರೆ ಸಾಕ್ಷಿಯು ಜಮೀನು ಕೊಡುವಾಗ ಮೇಲಿನ ಜಮೀನು ಕೆಳಗಿನ ಜಮೀನು ಎಂದು ಕೊಟ್ಟಿದ್ದರು ಹಾಗೂ ಪೂರ್ವ ಪಶ್ಚಿಮ ಎಂದು ಇರಲಿಲ್ಲ ಆದರೆ, ಆನಂತರ ಪೂರ್ವದ ಭಾಗ ಎಂದು ಡ ಸೃಷ್ಟಿ ಮಾಡಲಾಗಿದೆ ಎಂದು ನುಡಿದಿದ್ದಾರೆ. ಇಚ್ಚಂಗಿ ಗ್ರಾಮದ ರಿ. ಸ. ಸಂಖ್ಯೆ 152/2 ರ ಕ್ಷೇತ್ರ 02 ಎಕರೆ 20 ಗುಂಟೆ ಜಮೀನಿನ ಖಾತೆ ನನ್ನ ಹೆಸರಿಗೆ ಆಗಿದೆ ಎಂದರೆ ಸರಿ. 1992 ರಲ್ಲಿ ಆದಂತಹ ಖಾತೆಗಳನ್ನು ಪ್ರಶ್ನಿಸಿ ನಾನು ಯಾವುದೇ ಕಂದಾಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ. ಖಾತೆ ಆದಾಗಿನಿಂದ ನಾನು ನನ್ನ ಹಿಸ್ಸೆಯ ಜಮೀನಿನ ಮೇಲೆ ಬೆಳೆಸಾಲ ಪಡೆಯುತ್ತಿದ್ದೇನೆ ಎಂದರೆ ಸರಿ. ಅದೇ ರೀತಿ ನಿಂಗಪ್ಪ ಹಾಗೂ ಪುಟ್ಟಪ್ಪ ಪ್ರತ್ಯೇಕ ಸಾಲ ಪಡೆಯುತ್ತಿದ್ದಾರೆ ಎಂದರೆ ಸರಿ.

ಇಚ್ಚಂಗಿ ಗ್ರಾಮದ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 176 ರನ್ನು ನಾನು ನನ್ನ ಅಕ್ಕನ ಮದುವೆಯ ಖರ್ಚಿಗೋಸ್ಕರ ಗುಡ್ಡಪ್ಪನಿಗೆ ಮಾರಾಟ ಮಾಡಿರುತ್ತೇನೆ. ನಾನು ಮಾರಾಟ ಮಾಡಿದ ಪ್ರಕಾರ ಆ ಆಸ್ತಿಯ ಖಾತೆ ಗುಡ್ಡಪ್ಪನ ಹೆಸರಿಗೆ ಆಗಿದೆ ಎಂದರೆ ಸರಿ. ಹಾವೇರಿ ತಾಲುಕ ಪೈಕಿ ಹೊಸರಿತ್ತಿ ಗ್ರಾಮದ ಆಸ್ತಿ ಸಂಖ್ಯೆ 37/3 ರ ಖಾತೆ ನನ್ನ

ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಆನಂತರ ಆ ಆಸ್ತಿಯ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಆಗಿದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತ ಪಟ್ಟಿದ್ದಾಳೆ. ನನ್ನ ತಾಯಿ ಮೃತ ಪಟ್ಟದ ನಂತರ ನಾನು ನನ್ನ ಹೆಸರಿನಲ್ಲಿ ವಾರಸಾ ನಾತೆಯಿಂದ ಖಾತೆ ಮಾಡಿಸಿಕೊಂಡಿಲ್ಲ. ನನ್ನ ತಾಯಿಗೆ ನಾನು ಮತ್ತು ನನ್ನ ಅಕ್ಕ, ಹನಮವ್ವ ಉರ್ಫ ನೀಲವ್ವ ಮಕ್ಕಳು. ನನ್ನ ಅಕ್ಕನ್ನನ್ನು ಹೊಸರಿತ್ತಿ ಗ್ರಾಮಕ್ಕೆ ಕೊಡಲಾಗಿದೆ.

ಇಚ್ಚಂಗಿ ಗ್ರಾಮದ ರಿ.ಸ.ಸಂಖ್ಯೆ: 159/1 ಕ್ಷೇತ್ರ 05 ಎಕರೆ 25 ಗುಂಟೆ, ರಿ.ಸ. ಸಂಖ್ಯೆ: 158/4 ಪಿ1 ಕ್ಷೇತ್ರ 04 ಎಕರೆ 33 ಗುಂಟೆ, ರಿ.ಸ.ಸಂಖ್ಯೆ: 158/2 ಕ್ಷೇತ್ರ 04 ಎಕರೆ 39 ಗುಂಟೆ ಜಮೀನುಗಳು ಹಿರಿಯರಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ಈ ಜಮೀನುಗಳಲ್ಲಿ ಇವತ್ತಿನವರೆಗೂ ಹಿಸ್ಸೆ ಆಗಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ನಮ್ಮ ಕುಟುಂಬದ ಬೇರೆ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಅಡಿವೆಪ್ಪನ ಕುಟುಂಬಕ್ಕೆ ಒಟ್ಟು ಎಷ್ಟು ಮನೆ ಆಸ್ತಿಗಳು ಇವೆ ಎಂದು ಹೇಳಲು ಆಗುವುದಿಲ್ಲ.

ಹಿಸ್ಸೆಗೋಸ್ಕರ ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಜಗಳ ಆಯಿತು ಎಂದು ನನಗೆ ನೆನಪಿಲ್ಲ. 1992 ರಲ್ಲಿ ಕೆಲವು ಆಸ್ತಿಗಳ ವಿಭಾಗಆಗಿ ಖಾತೆ ಆಗಿದ್ದು ಈಗ ಮತ್ತೆ ವಿಭಾಗಕೇಳಿ ದಾವೆ ಹಾಕಲು ಕಾರಣ ಏನು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಅಕ್ಕ ಹಿಸ್ಸೆ ಕೇಳಿದ್ದರಿಂದ ಹಾಗೂ 1992 ರಲ್ಲಿನಾನು ಚಿಕ್ಕವನಿದ್ದು ನನಗೆ ಸರಿಯಾದ

ಹಿಸ್ಸೆ ಕೊಡದಿರುವ ಕಾರಣ ಈ ದಾವೆ ಹಾಕಿರುತ್ತೇನೆ. ನನ್ನ ಹಿಸ್ಸೆಗೆ ಬಂದ ಜಮೀನಿನಲ್ಲಿ ನಾನು ನನ್ನ ಅಕ್ಕನಿಗೆ ಹಿಸ್ಸೆ ಕೊಟ್ಟಿಲ್ಲ. ನನ್ನ ಅಕ್ಕನಿಗೆ ನಾನು ಹಿಸ್ಸೆ ಕೊಡದಿರುವ ಕಾರಣ ನನ್ನ ಅಕ್ಕ ನನ್ನನೊಂದಿಗೆ ಕೂಡಿಕೊಂಡು ಈ ದಾವೆ ಹಾಕಿದ್ದಾಳೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಒಬ್ಬನೇ ಮಾಡಿರುತ್ತೇನೆ. 1992 ರಲ್ಲಿ ವಿಭಾಗ ಆಗಿದ್ದರೂ ಸಹ ಈಗ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಫಕ್ಕೀರಪ್ಪನ ಹಿಸ್ಸೆಗೆ ಇಚ್ಚಂಗಿ ಗ್ರಾಮದಲ್ಲಿ ಒಂದು ಮನೆ ಮತ್ತು ಒಂದು ಖಲ್ಲಾ ಜಾಗೆ ಬಂದಿರುತ್ತದೆ. ಪುಟ್ಟಪ್ಪ ಮತ್ತು ನಿಂಗಪ್ಪನ ಹೆಂಡತಿಯರ ಹೆಸರಿನಲ್ಲಿ ಆ ಮನೆ ಮತ್ತು ಖುಲ್ಲಾ ಜಾಗೆಯ ಖಾತೆ ಮಾಡಿಸಿ ಅವರಿಬ್ಬರು ಆಶ್ರಯ ಯೋಜನೆಯ ಮನೆ ಹಾಕಿಸಿಕೊಂಡಿದ್ದಾರೆ. ನಿಂಗಪ್ಪ ಮತ್ತು ಪುಟ್ಟಪ್ಪ ಹೆಂಡತಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)